# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 60 (481)
2. ಸದಸ್ಯರ ಹೆಸರು : ಶ್ರೀ ಪಿ.ಹೆಚ್.ಪೂಜರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 11.12.2025
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನಲ್ಲಿ ನೀರಾವರಿ ವಂಚಿತ ಸಾವಿರಾರು ಹೆಕ್ಟೇರ್ ಭೂಮಿಗೆ ನೀರು ಒದಗಿಸುವ ದೃಷ್ಟಿಯಿಂದ 2022ರಲ್ಲಿ ಅನುಮೊದನೆಗೊಂಡ ಶಿರೂರು ಏತ ನೀರಾವರಿ ಯೋಜನೆಯು ಇಲ್ಲಿಯವರೆಗೆ ಜಾರಿಯಾಗದೇ ಯೋಜನೆಯ ವ್ಯಾಪ್ತಿಯಲ್ಲಿ ಬರುವ ರೈತರು ಅನುಭವಿಸುತ್ತಿರುವ ನೋವು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಾಗಲಕೋಟೆ ಜಿಲ್ಲೆಯ ಬಾಗಲಕೋಟೆ ತಾಲೂಕಿನಲ್ಲಿ ಸುಮಾರು 10224.57 ಹೆಕ್ಟೇರ್ ಭಾದಿತ ಅಚ್ಚುಕಟ್ಟು ಪ್ರದೇಶಕ್ಕೆ 1.60 ಟಿಎಂಸಿ ನೀರನ್ನು ಬಳಸಿ ನೀರಾವರಿ ಸೌಲಭ್ಯ ಕಲ್ಪಿಸಲು ಶಿರೂರ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು 2 ಹಂತಗಳಲ್ಲಿ ಕೈಗೊಳ್ಳಲು ಅನುಮೋದನೆ ನೀಡಲಾಗಿದೆ. ಅದರನ್ವಯ, ಹಂತ-1ಕ್ಕೆ ಸಂಬಂಧಿಸಿದಂತೆ ಇನ್‌ಟೇಕ್ ಕೆನಾಲ್, ಜಾಕವೆಲ್, ಪಂಪ್-ಹೌಸ್ ಹಾಗೂ ವಿದ್ಯುತ ಉಪ ಕೇಂದ್ರ ಘಟಕಗಳನ್ನು ಒಳಗೊಂಡಿರುತ್ತದೆ. ಗುತ್ತಿಗೆ ಕರಾರು ಒಪ್ಪಂದವಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ.<br><br>ಈ ಯೋಜನೆಯ ಹಂತ-2 ಕ್ಕೆ ಸಂಬಂಧಿಸಿದಂತೆ ರೇಸಿಂಗ್ ಮೇನ್, ಡೆಲಿವರಿ ಛೇಂಬರ್, ಡಿಸ್ಟ್ರಿಬ್ಯೂಷನ್ ನೆಟ್‌ವರ್ಕ್ ಇತ್ಯಾದಿ ಘಟಕಗಳನ್ನು ಒಳಗೊಂಡಿದ್ದು, ಕಾಮಗಾರಿಯು ಟೆಂಡರ ಪ್ರಕ್ರಿಯೆ ಹಂತದಲ್ಲಿದ್ದು, ಸಕ್ಷಮ ಪ್ರಾಧಿಕಾರದಿಂದ ಟೆಂಡರ್ ಅನುಮೋದನೆಗೊಂಡ ನಂತರ ಕಾಮಗಾರಿಯನ್ನು ಕೈಗೆತ್ತಿಕೊಂಡು ಯೋಜನೆಯನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಆ) | ಬಂದಿದ್ದಲ್ಲಿ ಯೋಜನೆಯನ್ನು ತ್ವರಿತವಾಗಿ ಜಾರಿಮಾಡಲು ಸರಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ರೂಪ ರೇಷಗಳೇನು: (ಮಾಹಿತಿ ನೀಡುವುದು) | |

**ಸಂಖ್ಯೆ: ಜಸಂಇ 82 ಡಬ್ಲ್ಯೂಎಲ್ಎ 2025**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**